**ಕರ್ನಾಟಕ ಸರ್ಕಾರ**

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಉ ನಿ : ಸುಮಪ : 2019–20** **ದಿನಾಂಕ: 23–08–2019**

## ಪತ್ರಿಕಾ ಆಮಂತ್ರಣ

**1. ಕಲಬುರಗಿ ವಿಮಾನ ನಿಲ್ದಾಣದ ಕಾರ್ಯಾಚರಣೆ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ ಸರ್ಕಾರದ ಕೆ.ಎಸ್.ಐ.ಐ.ಡಿ.ಸಿ. ನಿಗಮ ಮತ್ತು ಕೇಂದ್ರ ನಾಗರಿಕ ವಿಮಾನ ಯಾನ ಮಂತ್ರಾಲಯದ ಪರವಾಗಿ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ನಡುವೆ ಒಡಂಬಡಿಕೆಗೆ ಸಹಿ**

**ದಿನಾಂಕ : 24–08–2019 ಶನಿವಾರ ಬೆಳಿಗ್ಗೆ 11–00 ಗಂಟೆಗೆ**

**ಸ್ಥಳ : ಕೊಠಡಿ ಸಂಖ್ಯೆ 313 , ವಿಧಾನ ಸೌಧ, ಬೆಂಗಳೂರು**

## "ಗಣೇಶ ಚತುರ್ಥಿ" ಸುರಕ್ಷತಾ ಕ್ರಮ

**ಬೆಂಗಳೂರು, ಆಗಸ್ಟ್ 23 ( ಕರ್ನಾಟಕ ವಾರ್ತೆ ) :**

ದಿನಾಂಕ 02-09-2019 ರಿಂದ ಜರುಗಲಿರುವ "ಗಣೇಶ ಚತುರ್ಥಿ" ಹಬ್ಬದ ಸಮಯದಲ್ಲಿ ಅಗ್ನಿ ಅಪಘಾತ ಹಾಗೂ ಇತರೆ ಅನಾಹುತಗಳನ್ನು ತಡೆಗಟ್ಟಲು ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರವರಿಂದ ಈ ಕೆಳತೋರಿಸಿರುವ ಸುರಕ್ಷತಾ ಕ್ರಮಗಳನ್ನು ಪಾಲಿಸಲು ಸಾರ್ವಜನಿಕರಲ್ಲಿ ಕೋರಲಾಗಿದೆ.

1. ಗಣೇಶನ ಮೂರ್ತಿಯನ್ನು ಪ್ರತಿಷ್ಠಾಪಿಸುವ ಪೆಂಡಾಲ್‌ನ್ನು ಜಿಂಕ್ ಶೀಟ್ ಅಥವಾ ಇತರೆ ಅಗ್ನಿ ನಿರೋಧಕ ವಸ್ತುಗಳನ್ನು ಬಳಸಿ ನಿರ್ಮಿಸತಕ್ಕದ್ದು.

2. ಪೆಂಡಾಲ್‌ಗಳನ್ನು ರಸ್ತೆಗಳಲ್ಲಿ ನಿರ್ಮಿಸುವುದನ್ನು ತಪ್ಪಿಸತಕ್ಕದ್ದು ಹಾಗೂ ತುರ್ತು ಪರಿಸ್ಥಿತಿ ಸಂದರ್ಭಗಳಲ್ಲಿ ಪೆಂಡಾಲ್‌ಗಳನ್ನು ತಲುಪಲು ಸೂಕ್ತ ರಸ್ತೆಯನ್ನು ವ್ಯವಸ್ಥಿಸತಕ್ಕದ್ದು.

3. ಪ್ರತಿಯೊಂದು ಪೆಂಡಾಲ್‌ಗೆ ಮುಂದಿನಿಂದ ಹಾಗೂ ಹಿಂದಿನಿಂದ ಪ್ರವೇಶಿಸಿಸುವ ವ್ಯವಸ್ಥೆ ಇರಬೇಕು. ಇದರಿಂದ ಅಪಘಾತ ಸಂದರ್ಭದಲ್ಲಿ ಪರಿಸ್ಥಿತಿಗನುಗುಣವಾಗಿ ರಕ್ಷಣಾ ಕಾರ್ಯಕರ್ತರು ಪೆಂಡಾಲ್‌ಗೆ ಪ್ರವೇಶಿಸಿ ಒಳಗಿದ್ದವರನ್ನು ರಕ್ಷಿಸಬಹುದು.

4. ವಿದ್ಯುತ್ ಸಂಪರ್ಕವನ್ನು ನುರಿತ ಕೆಲಸಗಾರರ ಮೂಲಕ ಕಲ್ಪಿಸತಕ್ಕದ್ದು ಹಾಗೂ ತೆರೆದ ವೈರ್‌ಗಳನ್ನು ಅಳವಡಿಸತಕ್ಕದ್ದಲ್ಲ. ಸಡಿಲವಾದ ವೈರ್‌ಗಳನ್ನು ವಾಹಕದೊಂದಿಗೆ ಸಂಪರ್ಕಿಸತಕ್ಕದ್ದು.

5. ಪ್ರತಿಯೊಂದು ಪೆಂಡಾಲ್‌ನಲ್ಲಿ 5 ಕೆ.ಜಿ ಸಾಮರ್ಥ್ಯದ ABC ಅಗ್ನಿನಂದಕ, ಒಂದು 9 ಲೀಟರ್ ಸಾಮರ್ಥ್ಯದ ವಾಟರ್ ಪ್ರೆಜರ್ ಮಾದರಿ ಅಗ್ನಿನಂದಕ ಮತ್ತು 2 ಬಕೆಟುಗಳಲ್ಲಿ ಮರಳು ಹಾಗೂ ಎರಡು ಬಕೆಟುಗಳಲ್ಲಿ ನೀರನ್ನು ಇಟ್ಟಿರಬೇಕು.

6. ಪ್ರತಿಯೊಂದು ಪೆಂಡಾಲ್‌ನ ಪಕ್ಕದಲ್ಲಿ ಎರಡು ಡ್ರಮ್‌ನಲ್ಲಿ ಕನಿಷ್ಠ 400 ಲೀಟರ್ ನೀರನ್ನು ಶೇಖರಿಸಿಟ್ಟಿರಬೇಕು.

7. ಪೆಂಡಾಲ್‌ನಲ್ಲಿ ಅಡುಗೆ ಅಥವಾ ಧೂಮಪಾನಕ್ಕೆ ಅವಕಾಶ ನೀಡಬಾರದು ಹಾಗೂ ಸಂಬಂಧಿತ ಸೂಚನಾ ಫಲಕವನ್ನು ಪೆಂಡಾಲ್‌ನ ಹೊರ ಭಾಗದ ಎಲ್ಲ ದಿಕ್ಕುಗಳಲ್ಲಿ ಹಾಕಿರಬೇಕು.

8. ಪೆಂಡಾಲ್‌ಗಳಲ್ಲಿ ಪಟಾಕಿಗಳನ್ನು ಶೇಖರಿಸಿಡಬಾರದು ಹಾಗೂ ಹತ್ತಿರದಲ್ಲಿ ಪಟಾಕಿಗಳನ್ನು ಸಿಡಿಸಲು ಅವಕಾಶ ಕಲ್ಪಿಸಬಾರದು ಹಾಗೂ ಪೆಂಡಾಲ್‌ಗಳಲ್ಲಿ ಯಾವುದೇ ರೀತಿಯ ಹೊತ್ತಿ ಉರಿಯುವ ಸಾಮಗ್ರಿಗಳನ್ನು ಶೇಖರಿಸಿಡಬಾರದು ಹಾಗೂ ಪೆಂಡಾಲ್‌ಗಳಲ್ಲಿ ರಾತ್ರಿ ಹೊತ್ತು ಯಾರು ಮಲಗಿಕೊಳ್ಳದೆ ಹಾಗೇ ನೋಡಿಕೊಳ್ಳುವುದು.

9. ಪ್ರತಿ ಪೆಂಡಾಲ್‌ನಲ್ಲಿ ಅಗ್ನಿಶಾಮಕ ಇಲಾಖೆಯ ದೂರವಾಣಿ ಸಂಖ್ಯೆ 101 ಹಾಗೂ ಸ್ಥಳೀಯ ಪೊಲೀಸ್ ಕಂಟ್ರೋಲ್ ದೂರವಾಣಿ ಸಂಖ್ಯೆ 100 ನ್ನು ಸಾರ್ವಜನಿಕರಿಗೆ ಕಾಣುವಂತೆ ಪ್ರದರ್ಶಿಸತಕ್ಕದ್ದು ಎಂದು ಪ್ರಕಟಣೆ ತಿಳಿಸಿದೆ.

# Ganesha Chaturthi Precautionary Measures

Bengaluru, August 23 (Karnataka Information)

During the ensuring “Ganesha Chaturthi” Festival from 02-09-2019 the DGP and DG of Karnataka Fire & Emergency Services department request the public to take the following precautionary measures so as to avoid any unpleasant incidents:

1. During installation of Ganesh Idols fire resistance materials like zinc sheets ect. shall be used for the erection of pendals.

2. Pendals should not be constructed on the roads and they should be easily accessible for the emergency vehicles.

3. Access from front and rear of the pendals should be provided for any rescue operations.

4. The electrification should be done by the authorised persons and all the loose wires should be properly insulated and should be connected with conduit.

5. Minimum one water $CO_2$ type extinguishers of 9 ltrs. capacity and 2 water & sand filled buckets should be provided in each pendal.

6. Near each pendal minimum 400 ltrs. of water should be stores in 2 barrels.

7. Cooking and smoking shall be strictly prohibited in and around the pendals and "No Smoking" boards shall be displayed all sides of the pendals.

8. Neither the crackers shall be stored or burst in and around the pendals and should not stored any type of combustible materials in pendals and should not sleep in pendal during night time.

9. In each pendal, the telephone numbers of Fire Control i.e., 101 and Police Control 100 should be displayed says official press release.

## ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಆನ್‌ಲೈನ್ ಪ್ರವೇಶಾತಿ

**ಬೆಂಗಳೂರು, ಆಗಸ್ಟ್ 23 ( ಕರ್ನಾಟಕ ವಾರ್ತೆ )** :

ಆಗಸ್ಟ್ –2019 ನೇ ಸಾಲಿಗೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಹೊಸೂರು ರಸ್ತೆ, ಡೈರಿ ವೃತ್ತ, ಬೆಂಗಳೂರು –29 ಇಲ್ಲಿ ವಿವಿಧ ವೃತ್ತಿಗಳಲ್ಲಿ ಆನ್‌ಲೈನ್ ಪ್ರವೇಶಾತಿಯ ನಂತರ ಉಳಿಕೆಯಾಗಿರುವ ಸ್ಥಾನಗಳಿಗೆ ಆಕಸ್ಮಿಕ ಸುತ್ತಿನಲ್ಲಿ (Casual Round) ಪ್ರವೇಶಾತಿಗಾಗಿ ಅರ್ಹ ಆಸಕ್ತ ಪುರುಷ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ದಿನಾಂಕ 21–08–2019 ರಿಂದ ದಿನಾಂಕ 28–8–2019 ರ ವರೆಗೆ ಅರ್ಜಿ ಪಡೆಯಬಹುದಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 28–8–2019 ಆಗಿರುತ್ತದೆ. ದಿನಾಂಕ 29–8–2019 ಮತ್ತು ದಿನಾಂಕ 30–8–2019 ರಂದು ಅರ್ಜಿಗಳನ್ನು ಪರಿಶೀಲಿಸಿ

ಅರ್ಹ ಅಭ್ಯರ್ಥಿಗಳಿಗೆ ವಿವಿಧ ವೃತ್ತಿಗಳಲ್ಲಿ ಖಾಲಿ ಇರುವ ಸ್ಥಾನಗಳನ್ನು ಪ್ರವೇಶಾತಿಯ ನಿಯಮಾನುಸಾರ ಹಂಚಿಕೆ ಮಾಡಲಾಗುವುದು. ಹೆಚ್ಚಿನ ಮಾಹಿತಿಗೆ ಸಾರ್ವಜನಿಕರು/ಅಭ್ಯರ್ಥಿಗಳು ನೇರವಾಗಿ ಪ್ರಾಚಾರ್ಯರು/ಕಚೇರಿಯನ್ನು ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ : 080–26562307

## ಸಾರ್ವಜನಿಕ ಸಂಪರ್ಕ ಸಭೆ

**ಬೆಂಗಳೂರು, ಆಗಸ್ಟ್ 23 ( ಕರ್ನಾಟಕ ವಾರ್ತೆ ) :**

ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ರಾಜಾಜಿನಗರ ಬೆಂಗಳೂರು (ಪಶ್ಚಿಮ) ಬೆಂಗಳೂರು ಕಚೇರಿಯಿಂದ ಸಾರ್ವಜನಿಕ ಸಂಪರ್ಕ ಸಭೆ ಕಾರ್ಯಕ್ರಮವನ್ನು ಆಗಸ್ಟ್ 27 ರಂದು ಸಂಜೆ 4–00 ಗಂಟೆಗೆ ಈ ಕಚೇರಿಯ ಆವರಣದಲ್ಲಿ ನಡೆಸಲಾಗುವುದು.

ಸಾರ್ವಜನಿಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಕುಂದುಕೊರತೆಗಳನ್ನು ಬಗೆಹರಿಸಿಕೊಳ್ಳಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.